ಶ್ರೀ ಮಲ್ಲಾರಿಗೌಡ ಎಸ್ ಪಾಟೀಲ್.—ಅಧ್ಯಕ್ಷರೇ, ಕೌನ್ಸಿಲ್ ಛೇರ್ಮನ್ನರು ಮೆಸೇಜನ್ನು ಕನ್ನಡದಲ್ಲಿ ಕಳುಹಿಸುವುದು ಬೇಡವೇ ? ಇದರ ಬಗ್ಗೆ ಯಾರೂ ಏನೂ ಹೇಳುವುದಿಲ್ಲವೇ ?

(ಗೊಂದಲ)

ಉಪಾಧ್ಯಕ್ಷರು.—ಇನ್ನು ಮುಂದೆ ಅವರಿಗೆ ಕನ್ನಡದಲ್ಲಿ ಕಳುಹಿಸುವುದಕ್ಕೆ ಹೇಳೋಣ.

ನಿಯಮ ೩೩ಳಿರ ಮೇರೆಗೆ

(i) ಹಿರಿಯೂರಿನ ಸಬ್ ಇನ್ಸ್‌ಪೆಕ್ಟರ್‌ರವರು ಎಂ.ಎಲ್.ಎ. ರವರೊಡನೆ ದುರ್ವರ್ತನೆ ಮಾಡಿರುವ ಬಗ್ಗೆ

ಶ್ರೀ ಆರ್. ರಾಮಯ್ಯ.—ಅಧ್ಯಕ್ಷರೇ, ದಿನಾಂಕ ೧೭-೮-೧೯೮೫ರಂದು ಹಿರಿಯೂರು ಪೋಲೀಸ್ ಠಾಣೆಗೆ ದೂರವಾಣಿ ಮುಖೇನ "ಸಾರ್ವಜನಿಕರ ಪರ ಸರ್ಕಾರ ಅಥವಾ ನ್ಯಾಯಾಲಯ ನೀಡಬಹುದಾದ ದಿಕ್ಸೂಚಿಯನ್ನು ಅನುಸರಿಸುವಲ್ಲಿ ಅಲ್ಲಿಯ ಅಧಿಕಾರಿಯಾದ ಸಬ್ ಇನ್ಸ್‌ಪೆಕ್ಟರ್ ನಿಸ್ಸಾಹಯಕನಾದರೆ ರಕ್ಷಣೆ ಹೇಗೆ ಸಿಗುತ್ತದೆ" ಎಂಬುದನ್ನು ಮನವರಿಕೆ ಮಾಡಿಕೊಟ್ಟ ಕಾರಣಕ್ಕಾಗಿ ಆಲ್ಲಿಯ ಕೆಲವರನ್ನು ಪ್ರೇರೇಪಿಸಿ ಇಲ್ಲಸಲ್ಲದ್ದನ್ನು ನನ್ನ ವರ್ಚಸ್ಸಿಗೆ ಭಂಗತರುವ ರೀತಿಯಲ್ಲಿ ಬರೆಯಿಸಿರುವುದು, ಸಾಲದಿದ್ದಕ್ಕೆ ಇಲಾಖೆಯ ನೌಕರರನ್ನೇ ಸಂಪುಗೊಳಿಸುವಂತೆ ಯುತ್ಪಿಸಿದ್ದು ತೀರ ಕರ್ತವ್ಯಲೋಪನೆಯಾದ ಕೆಲಸ. ಜಿಲ್ಲಾ ಪೋಲೀಸ್ ಅಧಿಕಾರಿಯು ಇನ್ನು ಮುಂದೆ ಯಾವುದೇ ಕೆಲಸಕ್ಕೆ ನನ್ನನ್ನು ಠಾಣೆಗೆ ಬರುವಂತೆಯು ಹಾಗು ದೂರವಾಣಿಯಲ್ಲಿ ಸಂಪರ್ಕಿಸದಂತೆ ಆದೇಶಿಸಿರುವುದು ತಿಳಿದಿದೆ. ಲಂಚಗುಳಿತನ ಕಾನೂನಿನ ದುರುಪಯೋಗ, ಕೆಲವು ವ್ಯಕ್ತಿಗಳ ಮಾತಿನ ಗಾಲಿಯಂತೆ ಕೆಲಸ ನಿರ್ವಹಿಸುವ ಈ ಅಧಿಕಾರಿಯ ತಾಳಕ್ಕೆ ಕುಣಿಯಲು ನಾನು ಎಂದೂ ಬಗ್ಗೆನು. ಇದೇ ನೆಪಕ್ಕೆ ಈ ರೀತಿಯ ವರ್ತನೆಯನ್ನು ಇರಿಸಿಕೊಂಡಿರುವ ಈ ಅಧಿಕಾರಿಯು ಜಳಿ ಬಿಡಿಸಲು, ಹಾಗೂ ಶಾಸಕರ ಸ್ಥಾನಮಾನದ ಬಗ್ಗೆ ತಿಳುವಳಿಕೆಯಿಲ್ಲದೆ ನಾವೇ ಸರ್ವಸ್ವ ಎಂದು ವರ್ತಿಸುವ ಇಂತಹವರನ್ನು ಶ್ರೇಷ್ಠ ನ್ಯಾಯಾಲಯವು ಇತ್ತೀಚಿನ ದಿನಗಳಲ್ಲಿ ಕೊಟ್ಟ ತೀರ್ಪಿನ ರೀತಿ ಕ್ರಮ ಜರುಗಿಸಿ, ಬಡವರು ಅಸಹಾಯಕರ ಶ್ರೀರಕ್ಷೆಯನ್ನು ಇಲಾಖೆ ಹೊತ್ತಿದೆ ಎಂಬುದನ್ನು ರುಜುವಾತುಪಡಿಸುತ್ತದೆಂದು ಆಶಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹ ಸಚಿವರು).—ಇದನ್ನು ವಿಚಾರಣೆ ಮಾಡಿಸುತ್ತೇನೆ. ಹಾಗೂ ವಿಚಾರಣೆ ಮಾಡಿ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

(ii) ಸಮಾಜ ಕಲ್ಯಾಣ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ಕೆಲಸಗಾರರನ್ನು ಖಾಯಂಗೊಳಿಸುವ ಬಗ್ಗೆ

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ಸಮಾಜ ಕಲ್ಯಾಣ ಇಲಾಖೆಯವರು ನಡೆಸುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ವಿದ್ಯಾರ್ಥಿನಿಲಯಗಳು, ಆಶ್ರಮ ಶಾಲೆ ಮತ್ತು ಮಹಿಳಾ ಶ್ರೇಯೋಭಿವೃದ್ಧಿ ಕೇಂದ್ರಗಳಲ್ಲಿನ ದಿನಗೂಲಿ ನೌಕರರು ಸುಮಾರು ೧೦ ವರ್ಷಗಳಿಂದಲೂ ಕೆಲಸ ಮಾಡುತ್ತಿದ್ದು ಅವರುಗಳ ಸೇವೆಯನ್ನು ಖಾಯಂಗೊಳಿಸದೆ ಇರುವುದು ತಿಳಿದುಬಂದಿದೆ. ಇವರುಗಳು ಹತ್ತು ವರ್ಷಗಳಿಂದಲೂ ಸೇವೆ ಸಲ್ಲಿಸಿದ್ದು ಸಾಕಷ್ಟು ಅನುಭವ ಪಡೆದಿದ್ದಾರೆ. ಇಲಾಖೆಯವರು ಇವರ ಸೇವೆ ಹಾಗೂ ಅನುಭವಗಳನ್ನು ಕಡೆಗಣಿಸಿ ಹೊಸಬರನ್ನು ಸಂದರ್ಶನಕ್ಕೆ ಕರೆದು ಇವರ ಬದಲು ನೇಮಕ ಮಾಡಲು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆಂದು ತಿಳಿದುಬಂದಿದೆ. ಇದರಿಂದ ರಾಜ್ಯಾದ್ಯಂತ ಇರುವ ಸಾವಿರಾರು ಕುಟುಂಬಗಳು ಬೀದಿಪಾಲಾಗಿ ಉಪವಾಸದಿಂದ ನರಳುವ ಕರಾಳ ಸ್ಥಿತಿಗೆ ಸರ್ಕಾರವೇ ಕಾರಣವಾಗುತ್ತದೆ. ಆದ್ದರಿಂದ ಮೇಲ್ಕಂಡ ದಿನಗೂಲಿ ನೌಕರರನ್ನು ಅವರ ಸೇವೆಗಳಲ್ಲಿ ಖಾಯಂಗೊಳಿಸಿ ಈಗ ಅವರು ಪಡೆಯುತ್ತಿರುವ ಹತ್ತು ರೂಪಾಯಿ ದಿನಗೂಲಿಗೆ ಬದಲಾಗಿ ೨೦ ರೂಪಾಯಿ ದಿನಗೂಲಿಯನ್ನು ಕೊಡಬೇಕೆಂದು ಸರ್ಕಾರದವರನ್ನು ಒತ್ತಾಯಿಸುತ್ತೇನೆ.